<u>ಸಾಕ್ಷಿಯನ್ನು ದಿನಾಂಕ 18-05-2023 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.

<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಎಸ್.ಎ. ವಕೀಲರಿಂದಃ</u>

ನಮ್ಮ ಪಂಚಾಯತಿಯಿಂದ ದಿನಾಂಕ 09-07-2014 ರಿಂದ 11-07-2014 ರವರೆಗೆ ಉಪಗ್ರಹ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ತರಬೇತಿಯಲ್ಲಿ 50 ಜನ ಪ್ರಶಿಕ್ಷಣಾರ್ಥಿಗಳು ಪಾಲುಗೊಂಡಿದ್ದರು. ಅವರುಗಳ ಹೆಸರು ನನಗೆ ಗೊತ್ತಿಲ್ಲ. ಸದರಿ ತರಬೇತಿಗೆ ವೆಚ್ಚ ಮಾಡುವ ಸಲುವಾಗಿ ಸರ್ಕಾರದಿಂದ ರೂ. 11,840/- ಗಳನ್ನು ಕೊಡಲಾಗಿತ್ತು. ಸದರಿ ಹಣವನ್ನು ವೆಚ್ಚ ಮಾಡುವ ಕುರಿತಾದ ಸರ್ಕಾರಿ ಆದೇಶವನ್ನು ನಾನು ಪೊಲೀಸರಿಗೆ ಕೊಟ್ಟಿಲ್ಲ. ತರಬೇತಿಗೆ ಮೀಸಲಾಗಿದ್ದ ಹಣವನ್ನು ತರಬೇತಿ ಆರಂಭವಾಗುವುದಕ್ಕೆ ಮೊದಲೆ ಅಂದರೆ ಮುಂಗಡವಾಗಿ ಕೊಡಬಹುದು ಎಂದರೆ ಸರಿ. ತರಬೇತಿ ಮುಗಿದ ನಂತರ ಖರ್ಚು-ವೆಚ್ಚದ ಲೆಕ್ಕ ಕೊಡಬೇಕಾಗುತ್ತದೆ ಎಂದರೆ ಸರಿ.

ಸದರಿ ತರಬೇತಿ ವೆಚ್ಚದ ಸಂಬಂಧ ಆರೋಪಿ ಶಿವಶರಣಪ್ಪನಿಗೆ ಒಟ್ಟು ಎರಡು ಚೆಕ್ಕು ಕೊಡಲಾಗಿತ್ತು. ಆ ಪೈಕಿ ಒಂದು ಚೆಕ್ಕು ಆರೋಪಿ ಹೆಸರಿಗೆ ಮತ್ತು ಇನ್ನೊಂದು ಚೆಕ್ಕನ್ನು ಉಡುಪಿ ಹೋಟೆಲಿನ ಪ್ರಭು ಎಂಬಾತನ ಹೆಸರಿಗೆ ಕೊಡಲಾಗಿತ್ತು. ಸರ್ಕಾರದಿಂದ ಕೊಡಲಾಗಿದ್ದ ರೂ.11,840/- ಗಳನ್ನು ಊಟದ ವೆಚ್ಚಕ್ಕಾಗಿ ವ್ಯಯಿಸಲಾಗಿದೆ ಎಂದರೆ ಸರಿ.

ನಮ್ಮ ಕಚೇರಿ ಟಿಪ್ಪಣಿಯಲ್ಲಿ ಊಟದ ವೆಚ್ಚಕ್ಕಾಗಿನ ಹಣವನ್ನು ಚೆಕ್ ಮೂಲಕ ಹೋಟೆಲ್ ಮಾಲೀಕರ ಹೆಸರಿಗೆ ಕೊಡಬೇಕೆಂದು ನಮೂದಿಸಲಾಗಿದೆ ಎಂದರೆ ಸರಿ. ಆ ರೀತಿ ಟಿಪ್ಪಣಿ ನಮೂದಿಸಿದ್ದರು ಚೆಕ್ಕನ್ನು ಆರೋಪಿ ಹೆಸರಿಗೆ ಯಾವ ಕಾರಣಕ್ಕೆ ಕೊಡಲಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ತರಬೇತಿಗೆ ಬೇಕಾಗುವ ಸಣ್ಣ-ಪುಟ್ಟ ಖರ್ಚನ್ನು ನಿರ್ವಹಿಸಲು ಆತನ ಹೆಸರಿಗೆ ಚೆಕ್ಕು ಕೊಡಲಾಗಿತ್ತು ಎನ್ನುತ್ತಾರೆ. ಸಣ್ಣ-ಪುಟ್ಟ ಖರ್ಚು ಎಂದರೆ ಯಾವುದು ಎಂದು ಪ್ರಶ್ನಿಸಲಾಗಿ ಸಾಕ್ಷಿ ಚಹಾ, ಕಾಫಿ, ಇತರೆ ಪಾನಿಯ, ಪೆನ್ನು-ಪುಸ್ತಕ, ಒತ್ತಿಗೆ ಮತ್ತಿತರ ಪರಿಕರಗಳನ್ನು ಖರೀದಿ ಮಾಡುವುದಿತ್ತು ಎನ್ನುತ್ತಾರೆ. ಕಚೇರಿ ಟಿಪ್ಪಣಿಯಲ್ಲಿ ನಾನು ಮೇಲೆ ಹೇಳಿದ ಉದ್ದೇಶಕ್ಕಾಗಿ ಸರ್ಕಾರದಿಂದ ನಿಯೋಜಿಸಲಾಗಿದ್ದ ಹಣವನ್ನು ಖರ್ಚು ಮಾಡಬೇಕೆಂಬ ಉಲ್ಲೇಖ ಇಲ್ಲ ಎಂದರೆ ಸರಿ.

ಸಾಮಾನ್ಯವಾಗಿ ಯಾರ ಹೆಸರಿಗೆ ಚೆಕ್ಕು ಕೊಡಲಾಗುತ್ತದೆಯೋ ಅವರ ಖಾತೆಗೆ ಬ್ಯಾಂಕ ಹಣ ಪಾವತಿ ಮಾಡುತ್ತದೆ ಎಂದರೆ ಸರಿ. ಅದರಂತೆ ಉಡುಪಿ ಹೋಟೆಲ್ ಮಾಲೀಕ ಪ್ರಭುವಿನ ಹೆಸರಿಗೆ

ಕೊಟ್ಟ ಚೆಕ್ಕನ ಹಣವನ್ನು ಆತನ ಖಾತೆಗೆ ಬ್ಯಾಂಕನವರು ಪಾವತಿ ಮಾಡಿದ್ದಾರೆ ಎಂದರೆ ಸರಿ. ಸದರಿ ಪ್ರಭುವಿಗೆ ಚೆಕ್ ಕೊಡುವ ಮೊದಲು ನಮ್ಮ ಇಲಾಖೆಯ ಬ್ಯಾಂಕ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಚೆಕ್ಕು ಕೊಟ್ಟು ನಗದಿಕರಣಗೊಂಡ ನಂತರ ನಮ್ಮ ಇಲಾಖೆ ಖಾತೆಯಲ್ಲಿ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ.

ಕೃಷ್ಣ ಗ್ರಾಮೀಣ ಬ್ಯಾಂಕನಲ್ಲಿ ತೆರೆಯಲಾಗಿದ್ದ ಉಪಗ್ರಹ ತರಬೇತಿ ಶಾಖೆಗೆ ಸಂಬಂಧಪಟ್ಟ ಖಾತೆ ನಂಬರ 2059049568 ಆಗಿತ್ತು. ಸದರಿ ಖಾತೆಗೆ ಸಂಬಂಧಪಟ್ಟ ಪಾಸ್ ಪುಸ್ತಕ ಮತ್ತು ಚೆಕ್ ಪುಸ್ತಕಗಳನ್ನು ಪೊಲೀಸರಿಗೆ ಕೊಟ್ಟಿದ್ದೇನೆ. ಬೇರೆ ತರಬೇತಿ ಕಾರ್ಯಕ್ರಮಕ್ಕಾಗಿ ಬೇಕಾಗಿದ್ದ ಹಣವನ್ನು ಮುಂಗಡವಾಗಿ ಪಡೆಯಲಾಗಿತ್ತು ಎನ್ನುವುದು ಸರಿಯಲ್ಲ.

ನಿಪಿ-2 ಮತ್ತು 3 ರ ಚೆಕ್ಕುಗಳನ್ನು ತಿದ್ದಿ '4' ಎಂಬ ಸಂಖ್ಯೆಯನ್ನು ಬರೆದಿದ್ದನ್ನು ನಾನು ಕಣ್ಣಾರೆ ನೋಡಿಲ್ಲ. ಚೆಕ್ಕುಗಳನ್ನು ವಿತರಿಸುವ ಮೊದಲು ನಾನು ಮತ್ತು ಸಹಾಯಕ ಲೆಕ್ಕಾಧಿಕಾರಿಗಳು ಅದನ್ನು ಪರಿಶೀಲನೆ ಮಾಡಿರುತ್ತೇವೆ ಎನ್ನುವುದು ಸರಿ. ನಿಪಿ-3 ಮತ್ತು 4 ರ ಚೆಕ್ಕುಗಳನ್ನು ತಿದ್ದಿರುವುದು ಮೇಲ್ನೊಟಕ್ಕೆ ಕಾಣುವುದಿಲ್ಲ ಎಂದರೆ ಸಾಕ್ಷಿ ಸದರಿ ಚೆಕ್ಕುಗಳನ್ನು ಸಂಪೂರ್ಣವಾಗಿ ಆರೋಪಿಯೇ ತನ್ನ ಕೈ ಬರವಣಿಗೆಯಲ್ಲಿ ಬರೆದಿರುವುದರಿಂದ ತಿದ್ದುಪಡಿ ಮಾಡಿರುವುದು ಮೇಲ್ನೊಟಕ್ಕೆ ಗೊತ್ತಾಗುವುದಿಲ್ಲ ಎನ್ನುತ್ತಾರೆ.

ಆರೋಪಿಗೆ ಮೌಖಿಕವಾಗಿ ಹಣವನ್ನು ವಾಪಸ್ಸು ಸಂಬಂಧಪಟ್ಟ ಖಾತೆಗೆ ಜಮಾ ಮಾಡುವಂತೆ ಹೇಳಿ ಸಮಯಾವಕಾಶ ಕೊಡಲಾಗಿತ್ತು ಆತ ಸದರಿ ಅವಧಿಯನ್ನು ಹಣ ಜಮೆ ಮಾಡದೆ ಇದ್ದರಿಂದ ದೂರು ಕೊಡಲು ತಡವಾಯಿತು ಎಂದು ನಿಪಿ-1 ರ ದೂರಿನಲ್ಲಿ ನಾನು ನಮೂದು ಮಾಡಿಲ್ಲ.

ನಿಪಿ-2 ಮತ್ತು 3 ರ ಚೆಕ್ಕುಗಳನ್ನು ತಿದ್ದುಪಡಿ ಮಾಡಿ ಆರೋಪಿ ಸರ್ಕಾರಕ್ಕೆ ರೂ.80,000/- ವಂಚಿಸಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಮತ್ತು ನಮ್ಮ ಇಲಾಖೆಯ ಸಹಾಯಕ ಲೆಕ್ಕಾಧಿಕಾರಿಗಳು ನಮ್ಮ ತಪ್ಪನ್ನು ಮುಚ್ಚಿಹಾಕುವ ಸಲುವಾಗಿ ಆರೋಪಿ ವಿರುದ್ಧ ಸುಳ್ಳು ಆರೋಪ ಹೊರಿಸಿ, ಸುಳ್ಳು ದೂರು ಕೊಡಲಾಗಿದೆ ಎನ್ನುವುದು ಸರಿಯಲ್ಲ. ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡು ಪೊಲೀಸರಿಗೆ ನಿಪಿ-1 ರಂತೆ ಸುಳ್ಳು ದೂರು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿರುವುದೇಲ್ಲಾ ಸುಳ್ಳು ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**